
## ಮಣ್ಣಿನ ಕಸುವು




**ಬಿಡಿ ಬಿಡಿ** ಬರಹ-ಕೃತಿಗಳ ಓದು-ವಿಶ್ಲೇಷಣೆಯೇ ಅಪರೂಪವಾಗುತ್ತಿರುವ ದಿನಗಳಲ್ಲಿ, ಲಂಕೇಶರ ಒಟ್ಟಾರೆ ಕಥನ ಸಾಹಿತ್ಯವನ್ನು ಚರ್ಚಿಸುವ 'ಮಣ್ಣಿನ ಕಸುವು' ಪ್ರಕಟಗೊಂಡಿದೆ. ಈ ಕೃತಿಯ ಲೇಖಕ ಸುರೇಶ್ ನಾಗಲಮಡಿಕೆ ಸಾಹಿತ್ಯ ವಿಮರ್ಶೆಯಲ್ಲಿ ಗಂಭೀರವಾಗಿ ತೊಡಗಿಕೊಂಡಿರುವ ಸಮಕಾಲೀನ ವಿಮರ್ಶಕರಲ್ಲೊಬ್ಬರು. ಕೆ.ಎಸ್. ನರಸಿಂಹ ಸ್ವಾಮಿ ಅವರ ಕಾವ್ಯ ('ಉಳಿದದ್ದು ಆಕಾಶ'), ಜನಪದ ಮಹಾಕಾವ್ಯಗಳ ಸಂಸ್ಕೃತಿ ಸಂಕಥನ ('ಹಾಡು ಕಲಿಸಿದ ಹರ') ಹಾಗೂ ಹೊಸ ತಲೆಮಾರಿನ ಕಾವ್ಯದ ವಿಮರ್ಶೆ ('ಹಲವು ಬಣ್ಣದ ಹಗ್ಗ') ಕೃತಿಗಳ ಮೂಲಕ ಸಹೃದಯರ ಗಮನಸೆಳೆದಿರುವ ಸುರೇಶ್, ಈಗ ಲಂಕೇಶರ ಕಥನಗಳ ವಿಶ್ಲೇಷಣೆಯೊಂದಿಗೆ ಸಹೃದಯರಿಗೆ ಮುಖಾಮುಖಿಯಾಗಿದ್ದಾರೆ.

'ಮಣ್ಣಿನ ಕಸುವು' ಕೃತಿ ಮೂರು ಕಾರಣಗಳಿಂದಾಗಿ ಮುಖ್ಯವಾದುದು. ಕೃತಿಯ ಶೀರ್ಷಿಕೆಯೇ ಸೂಚಿಸುವಂತೆ, ಈ ಮಣ್ಣಿನ ಶಕ್ತಿಯ ಅಸಾಧಾರಣ ಅಭಿವ್ಯಕ್ತಿಯ ರೂಪವೊಂದರಲ್ಲಿ ನೋಡಬಹುದಾದ ಲಂಕೇಶರನ್ನು ಹೊಸ ತಲೆಮಾರಿಗೆ ಪರಿಚಯಿಸುವ ಮಹತ್ವಾಕಾಂಕ್ಷೆ ಈ ಕೃತಿಗಿದೆ. ಲಂಕೇಶರ ಕಥೆ-ಕಾದಂಬರಿಗಳನ್ನು ಕುರಿತು ಇಂಥದೊಂದು ಸಮಗ್ರ ಕೃತಿ ಪ್ರಕಟಗೊಳ್ಳುತ್ತಿರುವುದು ಇದೇ ಮೊದಲ ಬಾರಿಗೆ ಎನ್ನುವುದು ಈ ಕೃತಿಯ ಮತ್ತೊಂದು ವಿಶೇಷ. ಲಂಕೇಶರ ಕಥನದ ಅನನ್ಯತೆಯೊಂದಿಗೆ, ಕನ್ನಡ ಕಥಾ ಪರಂಪರೆಯ ಪಕ್ಷಿನೋಟವನ್ನು ಪರಿಚಯಿಸುವುದು ಕೃತಿಯ ಮತ್ತೊಂದು ವಿಶೇಷ.

ಕೃತಿಯ ಆರಂಭದಲ್ಲಿಯೇ, ಕನ್ನಡ ಕಥಾಲೋಕವನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಮೂಲಕ, ಲಂಕೇಶರನ್ನು ಕೇಂದ್ರವಾಗುಳ್ಳ ಈ ಕೃತಿಗೆ ಕನ್ನಡ ಕಥಾಸಾಹಿತ್ಯದ ಅವಲೋಕನದ ಸ್ವರೂಪವೂ ದೊರೆತಿದೆ. 'ಸ್ಥಳೀಯತೆ ಮತ್ತು ಪ್ರಾದೇಶಿಕತೆ', 'ಆಶಯ-ಆಕೃತಿಗಳನ್ನು ಮುರಿದು ಕಟ್ಟುವ ಪ್ರಕ್ರಿಯೆಯಲ್ಲಿನ ಸಾಮ್ಯತೆ', 'ಕನ್ನಡ ಕಥನ ಕ್ರಮ ಮತ್ತು ಕಾಮ' - ಶೀರ್ಷಿಕೆಗಳಲ್ಲಿನ ಬರಹಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತಿವೆ. ಕಥೆಗಾರರಾಗಿ ಲಂಕೇಶರ ವೈಶಿಷ್ಟ್ಯವನ್ನು ಸೂಚಿಸುವುದರ ಜೊತೆಗೆ, ಕನ್ನಡ ಕಥಾಲೋಕದ ಮೇಲೆ ಲಂಕೇಶ್ ಬೀರಿರುವ ಪ್ರಭಾವವನ್ನೂ ಕೃತಿ ಚರ್ಚಿಸುತ್ತದೆ. ಲಂಕೇಶ್ ಕಥೆಗಳ ಹೊಳಪಿಗೆ ಕಾರಣವಾಗುವ ಭಾಷೆಯ ಸಾಧ್ಯತೆಗಳು, ಮನುಷ್ಯ ಸಂಬಂಧಗಳು, ರಾಜಕಾರಣದ ಸೂಕ್ಷ್ಮಗಳು, ಸ್ತ್ರೀಲೋಕವನ್ನು ಸುರೇಶ್ ಚರ್ಚಿಸಿದ್ದಾರೆ.

ಲಂಕೇಶರ ಕಾದಂಬರಿಗಳು ಗ್ರಾಮಭಾರತದ ಭಿನ್ನ ಆಯಾಮಗಳನ್ನು ಚರ್ಚಿಸುವುದರ ಜೊತೆಗೆ, ನಗರ ಪ್ರದೇಶಗಳ ಬಿರುಕುಗಳನ್ನು ಒಳಗೊಳ್ಳುವ ಕುರಿತು ಸುರೇಶ್ ಗಮನಸೆಳೆಯುತ್ತಾರೆ. ಭಾರತೀಯ ಸಮಾಜದಲ್ಲಿ ಉಂಟಾದ ಪಲ್ಲಟಗಳನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲೂ ಈ ಕೃತಿಗಳು ಸನ್ನೆಯಾಗಿ ಒದಗಬಲ್ಲವು. ಲಂಕೇಶರ ಒಟ್ಟು ಕಥೆ-ಕಾದಂಬರಿಗಳು ಓದುಗರಿಗೆ ತಮ್ಮ ಕಾಲವನ್ನು ಅರಿಯುವ ಕನ್ನಡಿಯಾಗಿ ಯಾವ ರೂಪದಲ್ಲಿ ಪರಿಣಮಿಸುತ್ತವೆ ಎನ್ನುವುದನ್ನು ಹೊಳೆಯಿಸುವುದರಲ್ಲಿ 'ಮಣ್ಣಿನ ಕಸುವು' ಕೃತಿಯ ಯಶಸ್ಸಿದೆ.

**ಲೇ: ಸುರೇಶ್ ನಾಗಲಮಡಿಕೆ; ಪು: 176; ಬೆ: ₹ 210; ಪ್ರ: ದೀಪಂಕರ ಪ್ರಕಾಶನ, ಬೆಂಗಳೂರು. ಫೋನ್: 9886279441.**